Akashvani: Bangalore
National Bulletin In Kannada
12.08.2025 : 1.10pm

**ಆಕಾಶವಾಣಿ, ಬೆಂಗಳೂರು**

**ರಾಷ್ಟ್ರೀಯ ವಾರ್ತೆಗಳು**

**ಮುಖ್ಯಾಂಶಗಳು :**

1. ವಿಪಕ್ಷಗಳ ಗದ್ದಲ: ಲೋಕಸಭೆ ಕಲಾಪ ಮಧ್ಯಾಹ್ನ ೩ ಗಂಟೆಗೆ**,** ರಾಜ್ಯಸಭೆ ಕಲಾಪ ೨ ಗಂಟೆಗೆ ಮುಂದೂಡಿಕೆ
2. ಆಧಾರ್ ಮುಖ ದೃಢೀಕರಣ ವ್ಯವಸ್ಥೆ; ೨೦೦ ಕೋಟಿ ದಾಟಿದ ವಹಿವಾಟು
3. ನವದೆಹಲಿಯಲ್ಲಿ ನಾಳೆ ಭಾರತ-ಸಿಂಗಾಪುರ ಸಚಿವರ ದುಂಡುಮೇಜಿನ ೩ನೇ ಸುತ್ತಿನ ಸಭೆ
4. ವಿಶ್ವ ಕ್ರೀಡಾಕೂಟ: ವುಶು ಕ್ರೀಡೆಯ ಮಹಿಳೆಯರ ೫೨ ಕೆಜಿ ವಿಭಾಗದ ಫೈನಲ್‌ನಲ್ಲಿಂದು ನಮ್ರತಾ ಬಾತ್ರಾ - ಮೆಂಗ್ಯು ಚೆನ್ ಮುಖಾಮುಖಿ

**********

ವಿವಿಧ ವಿಷಯಗಳ ಕುರಿತು ವಿರೋಧ ಪಕ್ಷಗಳ ಗದ್ದಲದ ಹಿನ್ನೆಲೆಯಲ್ಲಿ ಲೋಕಸಭೆ ಕಲಾಪವನ್ನು ಮಧ್ಯಾಹ್ನ ೩ ಗಂಟೆಗೆ ಮತ್ತು ರಾಜ್ಯಸಭೆ ಕಲಾಪವನ್ನು ಮಧ್ಯಾಹ್ನ ೨ ಗಂಟೆಗೆ ಮುಂದೂಡಲಾಗಿದೆ. ಲೋಕಸಭೆಯಲ್ಲಿ ಬೆಳಗ್ಗೆ ೧೧ ಗಂಟೆಗೆ ಸದನ ಸೇರಿದಾಗ, ವಿರೋಧ ಪಕ್ಷಗಳು ಬಿಹಾರದಲ್ಲಿ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ ವಿಷಯವನ್ನು ಪ್ರಸ್ತಾಪಿಸಿ, ಅದರ ಬಗ್ಗೆ ಚರ್ಚೆಗೆ ಒತ್ತಾಯಿಸಿದವು. ಲೋಕಸಭಾಧ್ಯಕ್ಷ ಓಂ ಬಿರ್ಲಾ, ಪ್ರಶ್ನೋತ್ತರ ಅವಧಿಯನ್ನು ನಡೆಸಲು ಪ್ರಯತ್ನಿಸಿದರು. ಆದರೆ ವಿರೋಧ ಪಕ್ಷದ ಸದಸ್ಯರು ಘೋಷಣೆಗಳನ್ನು ಕೂಗಲು ಪ್ರಾರಂಭಿಸಿದರು ಮತ್ತು ಪ್ರತಿಭಟನೆಯನ್ನು ಮುಂದುವರಿಸಿದರು. ನಂತರ ಲೋಕಸಭಾಧ್ಯಕ್ಷರು ಮಧ್ಯಾಹ್ನ ೧೨ ಗಂಟೆಗೆ ಸದನವನ್ನು ಮುಂದೂಡಿದರು. ಗದ್ದಲದ ನಡುವೆ, ಕೇಂದ್ರ ಗ್ರಾಮೀಣಾಭಿವೃದ್ಧಿ ರಾಜ್ಯ ಸಚಿವ ಚಂದ್ರಶೇಖರ್ ಪೆಮ್ಮಸಾನಿ, ಪ್ರಧಾನಮಂತ್ರಿ ಆವಾಸ್ ಯೋಜನೆ ಅಡಿಯಲ್ಲಿ ನಿವಾಸಗಳ ನಿರ್ಮಾಣಕ್ಕೆ ಸಂಬಂಧಿಸಿದ ಪ್ರಶ್ನೆಗೆ ಉತ್ತರಿಸಿದರು. ಪ್ರಧಾನ ಮಂತ್ರಿ ಆವಾಸ್ ಯೋಜನೆ ಅಡಿಯಲ್ಲಿ ಕೇಂದ್ರ ಸರ್ಕಾರವು ಇಲ್ಲಿಯವರೆಗೆ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ೪ ಕೋಟಿ ೧೨ ಲಕ್ಷ ಮನೆಗಳನ್ನು ಹಂಚಿಕೆ ಮಾಡಿದೆ. ಈಗಾಗಲೇ ಎರಡು ಕೋಟಿ ೬೦ ಲಕ್ಷ ಮನೆಗಳನ್ನು ನಿರ್ಮಿಸಲಾಗಿದೆ ಎಂದು ತಿಳಿಸಿದರು. ನಂತರ ಮಧ್ಯಾಹ್ನ ೧೨ ಗಂಟೆಗೆ ಸದನ ಮತ್ತೆ ಸೇರಿದಾಗ, ವಿಪಕ್ಷಗಳ ಗದ್ದಲ ಮುಂದುವರಿದ ಕಾರಣ, ಲೋಕಸಭಾಧ್ಯಕ್ಷರು ಕಲಾಪವನ್ನು ಮಧ್ಯಾಹ್ನ ೩ ಗಂಟೆಗೆ ಮುಂದೂಡಿದರು. ಇನ್ನೊಂದೆಡೆ, ರಾಜ್ಯಸಭೆಯಲ್ಲಿ ಬೆಳಗ್ಗೆ ೧೧ ಗಂಟೆಗೆ ಸದನ ಸೇರಿದಾಗ, ಉಪ ಸಭಾಪತಿ ಹರಿವಂಶ್ ಶೂನ್ಯ ವೇಳೆಯನ್ನು ನಡೆಸಲು ಪ್ರಯತ್ನಿಸಿದಾಗ, ವಿರೋಧ ಪಕ್ಷದ ಸದಸ್ಯರು ಬಿಹಾರದಲ್ಲಿ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ ಮತ್ತು ಇತರೆ ವಿಷಯಗಳನ್ನು ಪ್ರಸ್ತಾಪಿಸಿದರು. ನಾಲ್ಕು ವಿಭಿನ್ನ ವಿಷಯಗಳ ಕುರಿತು ವಿವಿಧ ರಾಜಕೀಯ ಪಕ್ಷಗಳಿಂದ ೨೦ ಮುಂದೂಡಿಕೆ ಸೂಚನೆಗಳನ್ನು ಸ್ವೀಕರಿಸಿರುವುದಾಗಿ ಉಪ ಸಭಾಪತಿ ತಿಳಿಸಿದರು. ಅವುಗಳಲ್ಲಿ ೧೧ ವಿಚಾರಣೆಗೆ ಒಳಪಡುವ ವಿಷಯಗಳಿಗೆ ಸಂಬಂಧಿಸಿವೆ. ನಿಯಮಗಳ ಪ್ರಕಾರ, ವಿಚಾರಣೆಗೆ ಒಳಪಡುವ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳಲಾಗುವುದಿಲ್ಲ ಎಂದು ಹೇಳಿ, ಎಲ್ಲಾ ಸೂಚನೆಗಳನ್ನು ಅವರು ನಿರಾಕರಿಸಿದರು. ಪ್ರತಿಭಟನಾನಿರತ ಸದಸ್ಯರು ತಮ್ಮ ಸ್ಥಾನಗಳಿಗೆ ಹಿಂತಿರುಗಿ ಶೂನ್ಯ ವೇಳೆ ಪ್ರಾರಂಭಿಸಲು ಅವಕಾಶ ನೀಡುವಂತೆ ಅವರು ಪದೇ ಪದೆ ಮನವಿ ಮಾಡಿದರು. ಗದ್ದಲ ಮುಂದುವರಿದಂತೆ, ಉಪ ಸಭಾಪತಿಯವರು ಸದನವನ್ನು ಮಧ್ಯಾಹ್ನ ೨ ಗಂಟೆಗೆ ಮುಂದೂಡಿದರು.

**********

ಬಿಹಾರದಲ್ಲಿ ಮತದಾರರ ಪಟ್ಟಿ ವಿಶೇಷ ತೀವ್ರ ಪರಿಷ್ಕರಣೆ ಕುರಿತು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹಾಗೂ ಆರ್‌ಜೆಡಿ ಸೇರಿದಂತೆ ರಾಜಕೀಯ ಪಕ್ಷಗಳ ಹೇಳಿಕೆಗಳನ್ನು ಚುನಾವಣಾ ಆಯೋಗ ತಿರಸ್ಕರಿಸಿದೆ. ಸಾಮಾಜಿಕ ಮಾಧ್ಯಮದಲ್ಲಿ ಚುನಾವಣಾ ಆಯೋಗವು, ಶುದ್ಧ ಮತದಾರರ ಪಟ್ಟಿಗಳು ಪ್ರಜಾಪ್ರಭುತ್ವವನ್ನು ಬಲಪಡಿಸುತ್ತದೆ ಎಂದು ಹೇಳಿದೆ. ವಿಶೇಷ ತೀವ್ರ ಪರಿಷ್ಕರಣೆಗೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ಮತ್ತು ಎಣಿಕೆ ಹಂತದ ಅದರ ಪ್ರಮುಖ ಸಂಶೋಧನೆಗಳನ್ನು ಸಹ ಆಯೋಗ ಹಂಚಿಕೊಂಡಿದೆ. ಆಯೋಗವು ಬಿಹಾರದಲ್ಲಿ ವಿಶೇಷ ತೀವ್ರ ಪರಿಷ್ಕರಣೆಗೆ ಸಂಬಂಧಿಸಿದ ತನ್ನ ದೈನಂದಿನ

ಬುಲೆಟಿನ್‌ಗಳನ್ನು ಸಹ ಹಂಚಿಕೊಂಡಿದೆ. ಬಿಹಾರದಲ್ಲಿ ವಿಶೇಷ ತೀವ್ರ ಪರಿಷ್ಕರಣೆಗೆ ಸಂಬಂಧಿಸಿದಂತೆ ಮತದಾರರಿಂದ ನೇರವಾಗಿ ಸ್ವೀಕರಿಸಿದ ೧೦ ಸಾವಿರ ೫೭೦ ಆಕ್ಷೇಪಣೆಗಳ ಪೈಕಿ ೧೨೭ ಆಕ್ಷೇಪಣೆಗಳನ್ನು ಇದುವರೆಗೆ ಅಧಿಕಾರಿಗಳು ವಿಲೇವಾರಿ ಮಾಡಿದ್ದಾರೆ ಎಂದು ಚುನಾವಣಾ ಆಯೋಗ ತಿಳಿಸಿದೆ.

**********

ಆಧಾರ್ ಮುಖ ದೃಢೀಕರಣ ವ್ಯವಸ್ಥೆಯು ಒಂದು ಪ್ರಮುಖ ಮೈಲಿಗಲ್ಲ ತಲುಪಿದ್ದು, ೨೦೨೫ ರ ಆಗಸ್ಟ್ ೧೦ ರ ಹೊತ್ತಿಗೆ ೨೦೦ ಕೋಟಿ ವಹಿವಾಟುಗಳನ್ನು ದಾಟಿದೆ. ಕೇವಲ ಆರು ತಿಂಗಳಲ್ಲಿ ವಹಿವಾಟುಗಳ ಸಂಖ್ಯೆ ೧೦೦ ಕೋಟಿಯಿಂದ ೨೦೦ ಕೋಟಿಗೆ ದ್ವಿಗುಣಗೊಂಡಿದೆ. ಈ ಸಾಧನೆಯ ಕುರಿತು ಮಾತನಾಡಿದ ಯುಐಡಿಎಐ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಭುವನೇಶ್ ಕುಮಾರ್, ಇಷ್ಟು ಕಡಿಮೆ ಸಮಯದಲ್ಲಿ ೨೦೦ ಕೋಟಿ ಆಧಾರ್ ಫೇಸ್ ಅಥೆಂಟಿಕೇಶನ್ ವಹಿವಾಟುಗಳನ್ನು ತಲುಪಿರುವುದು, ಆಧಾರ್‌ನ ಸುರಕ್ಷಿತ ಮತ್ತು ನವೀನ ದೃಢೀಕರಣ ಪರಿಸರ ವ್ಯವಸ್ಥೆಯಲ್ಲಿ ನಾಗರಿಕರು ಮತ್ತು ಸೇವಾ ಪೂರೈಕೆದಾರರು ಹೊಂದಿರುವ ನಂಬಿಕೆ ಮತ್ತು ವಿಶ್ವಾಸವನ್ನು ಒತ್ತಿ ಹೇಳುತ್ತದೆ ಎಂದು ಹೇಳಿದರು. ಮುಖ ದೃಢೀಕರಣ ವ್ಯವಸ್ಥೆಯು-ಜನರು ತಮ್ಮ ಮುಖವನ್ನು ಬಳಸಿಕೊಂಡು ತಮ್ಮ ಗುರುತನ್ನು ತಕ್ಷಣವೇ ಪರಿಶೀಲಿಸಲು ದಾಖಲೆಗಳ ಅಗತ್ಯವಿಲ್ಲ. ಇದು ಸುರಕ್ಷಿತ, ವೇಗವಾಗಿದೆ ಮತ್ತು ಯಾವುದೇ ಸಮಯದಲ್ಲಿ, ಎಲ್ಲಿಯಾದರೂ ಬಳಸಬಹುದು. ಇದು ಭಾರತದಾದ್ಯಂತ ಜನರಿಗೆ, ದೂರದ ಹಳ್ಳಿಗಳಿಂದ ನಗರಗಳವರೆಗೆ, ಸೇವೆಗಳನ್ನು ಹೆಚ್ಚು ಸುಲಭವಾಗಿ ಪ್ರವೇಶಿಸಲು ಸಹಾಯ ಮಾಡುತ್ತಿದೆ ಎಂದು ಅವರು ವಿವರಿಸಿದರು.

**********

ಭಾರತ-ಸಿಂಗಾಪುರ ಸಚಿವರ ದುಂಡುಮೇಜಿನ ೩ನೇ ಸುತ್ತಿನ ಸಭೆ ನವದೆಹಲಿಯಲ್ಲಿ ನಾಳೆ ನಡೆಯಲಿದೆ. ಕೇಂದ್ರ ಸಚಿವರಾದ ಡಾ. ಎಸ್.ಜೈಶಂಕರ್, ನಿರ್ಮಲಾ ಸೀತಾರಾಮನ್, ಅಶ್ವಿನಿ ವೈಷ್ಣವ್ ಮತ್ತು ಪಿಯೂಷ್ ಗೋಯಲ್ ಈ ಸಭೆಯಲ್ಲಿ ಭಾಗವಹಿಸಲಿದ್ದಾರೆ. ಸಿಂಗಾಪುರದ ಉಪ ಪ್ರಧಾನಿ ಗ್ಯಾನ್ ಕಿಮ್ ಯೋಂಗ್ ಮತ್ತು ವಿದೇಶಾಂಗ ಸಚಿವೆ ಜೋಸೆಫೀನ್ ಟಿಯೊ ಸೇರಿದಂತೆ ಸಿಂಗಾಪುರದ ಸಚಿವರು ಸಭೆಯಲ್ಲಿ ಭಾಗವಹಿಸಲಿದ್ದಾರೆ ಎಂದು ವಿದೇಶಾಂಗ ಸಚಿವಾಲಯ ತಿಳಿಸಿದೆ. ಭಾರತ-ಸಿಂಗಾಪುರ ಸಹಕಾರಕ್ಕಾಗಿ ಹೊಸ ಕಾರ್ಯಸೂಚಿಯನ್ನು ರೂಪಿಸಲು ಸಚಿವರ ದುಂಡುಮೇಜಿನ ಸಭೆಯು ಒಂದು ವಿಶಿಷ್ಟ ಕಾರ್ಯವಿಧಾನವಾಗಿದೆ. ಭಾರತ ಮತ್ತು ಸಿಂಗಾಪುರ ಸಮಗ್ರ ಕಾರ್ಯತಂತ್ರದ ಪಾಲುದಾರಿಕೆಯನ್ನು ಹಂಚಿಕೊಂಡಿವೆ. ೩ನೇ ಸುತ್ತಿನ ಸಚಿವರ ದುಂಡುಮೇಜಿನ ಸಭೆಯು ಉಭಯ ದೇಶಗಳ ನಡುವಿನ ದ್ವಿಪಕ್ಷೀಯ ಸಂಬಂಧಗಳನ್ನು ಮತ್ತಷ್ಟು ವಿಸ್ತರಿಸಲು ಮತ್ತು ಬಲಗೊಳಿಸಲು ಮಾರ್ಗಗಳನ್ನು ಗುರುತಿಸುತ್ತದೆ ಎಂದು ಸಚಿವಾಲಯ ಹೇಳಿದೆ. ಭಾರತ-ಸಿಂಗಾಪುರ ಸಚಿವರ ದುಂಡುಮೇಜಿನ ಉದ್ಘಾಟನಾ ಸಭೆಯು ೨೦೨೨ ರ ಸೆಪ್ಟೆಂಬರ್‌ನಲ್ಲಿ ನವದೆಹಲಿಯಲ್ಲಿ ನಡೆದಿತ್ತು.

**********

ಕೇಂದ್ರ ಸಂಸ್ಕೃತಿ ಸಚಿವಾಲಯವು ನವದೆಹಲಿಯಲ್ಲಿ ಇಂದು ಹರ್ ಘರ್ ತಿರಂಗ ಅಭಿಯಾನದಡಿಯಲ್ಲಿ ತಿರಂಗ ಬೈಕ್ ರ್‍ಯಾಲಿಯನ್ನು ಆಯೋಜಿಸಿತ್ತು. ಕೇಂದ್ರ ಸಂಸ್ಕೃತಿ ಮತ್ತು ಪ್ರವಾಸೋದ್ಯಮ ಸಚಿವ ಗಜೇಂದ್ರ ಸಿಂಗ್ ಶೇಖಾವತ್, ಕೇಂದ್ರ ಸಚಿವರಾದ ಕಿರಣ್ ರಿಜಿಜು ಮತ್ತು ಸಂಜಯ್ ಸೇಠ್ ಹಾಗೂ ದೆಹಲಿ ಮುಖ್ಯಮಂತ್ರಿ ರೇಖಾ ಗುಪ್ತಾ ಈ ರ್‍ಯಾಲಿಯ ನೇತೃತ್ವ ವಹಿಸಿದ್ದರು. ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ಸಚಿವ ಗಜೇಂದ್ರ ಸಿಂಗ್ ಶೇಖಾವತ್, ತಿರಂಗ-ರಾಷ್ಟ್ರವನ್ನು ಒಟ್ಟಿಗೆ ಬಂಧಿಸುತ್ತದೆ ಮತ್ತು ದೇಶಕ್ಕಾಗಿ ತಮ್ಮ ಪ್ರಾಣವನ್ನು ತ್ಯಾಗ ಮಾಡಿದವರನ್ನು ನೆನಪಿಸುತ್ತದೆ. ದೇಶವು ವಿಕಸಿತ ಭಾರತದತ್ತ ಸಾಗುತ್ತಿರುವಾಗ ಇದು ಏಕತೆಯ ಸಂಕೇತವಾಗಿದೆ ಎಂದು ಹೇಳಿದರು.

**********

೧೮ನೇ ಅಂತಾರಾಷ್ಟ್ರೀಯ ಖಗೋಳಶಾಸ್ತ್ರ ಮತ್ತು ಖಗೋಳ ಭೌತಶಾಸ್ತ್ರ ಒಲಿಂಪಿಯಾಡ್ ಇಂದು ಮುಂಬೈನಲ್ಲಿ ಆರಂಭವಾಗಲಿದೆ. ಈ ಕಾರ್ಯಕ್ರಮವನ್ನು ಮುಂಬೈನ ಟಾಟಾ ಇನ್ಸ್ಟಿಟ್ಯೂಟ್ ಆಫ್ ಫಂಡಮೆಂಟಲ್ ರಿಸರ್ಚ್‌ನ ಹೋಮಿ ಬಾಬಾ ಸೆಂಟರ್ ಫಾರ್ ಸೈನ್ಸ್ ಎಜುಕೇಶನ್ ಆಯೋಜಿಸಿದೆ. ಉದ್ಘಾಟನಾ ಸಮಾರಂಭದಲ್ಲಿ ಪ್ರಧಾನ ವೈಜ್ಞಾನಿಕ ಸಲಹೆಗಾರ ಪ್ರೊಫೆಸರ್ ಅಜಯ್ ಕುಮಾರ್ ಸೂದ್, ಪರಮಾಣು ಇಂಧನ ಇಲಾಖೆಯ ಕಾರ್ಯದರ್ಶಿ ಡಾ. ಅಜಿತ್ ಕುಮಾರ್ ಮೊಹಂತಿ ಮತ್ತು ಅಂತಾರಾಷ್ಟ್ರೀಯ ಖಗೋಳ ಒಕ್ಕೂಟದ ಮಾಜಿ ಉಪಾಧ್ಯಕ್ಷ ಪ್ರೊಫೆಸರ್ ಅಜಿತ್ ಕೆಂಭಾವಿ

ಉಪಸ್ಥಿತರಿರಲಿದ್ದಾರೆ. ಈ ಕುರಿತು ಮಾಹಿತಿ ನೀಡಿದ ಹೋಮಿ ಬಾಬಾ ಸೆಂಟರ್ ಫಾರ್ ಸೈನ್ಸ್ ಎಜುಕೇಶನ್‌ನ ಕೇಂದ್ರ ನಿರ್ದೇಶಕ ಪ್ರೊಫೆಸರ್ ಅರ್ನಾಬ್ ಭಟ್ಟಾಚಾರ್ಯ, ೧೦ ದಿನಗಳ ಈ ಕಾರ್ಯಕ್ರಮದಲ್ಲಿ ೬೪ ದೇಶಗಳಿಂದ ಒಟ್ಟು ೨೮೮ ವಿದ್ಯಾರ್ಥಿಗಳು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

**********

ಹೊಸ ಸುಂಕಗಳು ಇಂದು ಜಾರಿಗೆ ಬರಲು ಕೆಲವೇ ಗಂಟೆಗಳ ಮೊದಲು, ನವೆಂಬರ್ ೧೦ ರವರೆಗೆ ತಮ್ಮ ವ್ಯಾಪಾರ ಒಪ್ಪಂದವನ್ನು ವಿಸ್ತರಿಸಲು ಅಮೆರಿಕ ಮತ್ತು ಚೀನಾ ಒಪ್ಪಿಕೊಂಡಿವೆ. ಜಂಟಿ ಹೇಳಿಕೆಯಲ್ಲಿ ಎರಡೂ ದೇಶಗಳು, ಯೋಜಿತ ಸುಂಕ ಹೆಚ್ಚಳವನ್ನು ಇನ್ನೂ ೯೦ ದಿನಗಳವರೆಗೆ ಮುಂದೂಡುವುದಾಗಿ ತಿಳಿಸಿವೆ. ಚೀನಾದ ಸರಕುಗಳ ಮೇಲಿನ ಸುಂಕವನ್ನು ಶೇಕಡಾ ೧೪೫ ಕ್ಕೆ ಹೆಚ್ಚಿಸುವುದನ್ನು ಅಮೆರಿಕ ವಿಳಂಬಗೊಳಿಸುತ್ತದೆ. ಇದೇ ವೇಳೆ ಅಮೆರಿಕ ಸರಕುಗಳ ಮೇಲಿನ ಶೇಕಡಾ ೧೨೫ ರಷ್ಟು ಸುಂಕವನ್ನು ಚೀನಾ ತಡೆಹಿಡಿಯುತ್ತದೆ ಎಂದು ಜಂಟಿ ಹೇಳಿಕೆಯಲ್ಲಿ ತಿಳಿಸಲಾಗಿದೆ.

**********

ದಕ್ಷಿಣ ಕೊರಿಯಾದ ಅಧ್ಯಕ್ಷ ಲೀ ಜೇ ಮ್ಯುಂಗ್, ಆಗಸ್ಟ್ ೨೪ ರಿಂದ ಮೂರು ದಿನಗಳ ಕಾಲ ಅಮೆರಿಕಕ್ಕೆ ಭೇಟಿ ನೀಡಲಿದ್ದಾರೆ. ಜೂನ್ ಆರಂಭದಲ್ಲಿ ಅಧಿಕಾರ ವಹಿಸಿಕೊಂಡ ನಂತರ ಅವರು ಅಮೆರಿಕಕ್ಕೆ ಭೇಟಿ ನೀಡುತ್ತಿರುವುದು ಇದೇ ಮೊದಲು. ಕೊರಿಯಾ ಪರ್ಯಾಯ ದ್ವೀಪದಲ್ಲಿ ಶಾಂತಿ ಸ್ಥಾಪಿಸುವ ಮತ್ತು ಪರಮಾಣು ನಿಶ್ಶಸ್ತ್ರೀಕರಣದ ಮೇಲೆ ಸಮನ್ವಯ ಸಾಧಿಸುವ ಮಾರ್ಗಗಳ ಕುರಿತು ಚರ್ಚಿಸಲು ಅವರು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರನ್ನು ಭೇಟಿಯಾಗಲಿದ್ದಾರೆ. ಈ ತಿಂಗಳ ಆರಂಭದಲ್ಲಿ ಉಭಯ ದೇಶಗಳು ಮಾಡಿಕೊಂಡ ವ್ಯಾಪಾರ ಒಪ್ಪಂದದ ಆಧಾರದ ಮೇಲೆ, ಅರೆವಾಹಕ, ಬ್ಯಾಟರಿ ಮತ್ತು ಹಡಗು ನಿರ್ಮಾಣ ಕ್ಷೇತ್ರಗಳಲ್ಲಿ ಕೈಗಾರಿಕಾ ಸಹಕಾರ, ಅತ್ಯಾಧುನಿಕ ತಂತ್ರಜ್ಞಾನಗಳು ಮತ್ತು ನಿರ್ಣಾಯಕ ಖನಿಜಗಳಲ್ಲಿನ ಆರ್ಥಿಕ ಪಾಲುದಾರಿಕೆಗಳನ್ನು ಸಹ ಮಾತುಕತೆಗಳು ಒಳಗೊಂಡಿರುತ್ತವೆ ಎಂದು ದಕ್ಷಿಣ ಕೊರಿಯಾ ತಿಳಿಸಿದೆ.

**********

ಚೀನಾದ ಚೆಂಗ್ಡುವಿನಲ್ಲಿ ಇಂದು ನಡೆಯಲಿರುವ ೨೦೨೫ ರ ವಿಶ್ವ ಕ್ರೀಡಾಕೂಟದ ವುಶು ಮಹಿಳೆಯರ ಸಾಂಡಾ ೫೨ ಕೆಜಿ ವಿಭಾಗದ ಫೈನಲ್‌ನಲ್ಲಿ ಭಾರತದ ನಮ್ರತಾ ಬಾತ್ರಾ ಅವರು ಚೀನಾದ ಮೆಂಗ್ಯು ಚೆನ್ ವಿರುದ್ಧ ಸೆಣಸಲಿದ್ದಾರೆ. ಪಂದ್ಯ ಭಾರತೀಯ ಕಾಲಮಾನ ಸಂಜೆ ೫.೩೦ಕ್ಕೆ ಆರಂಭವಾಗಲಿದೆ. ನಿನ್ನೆ ನಡೆದ ಸೆಮಿಫೈನಲ್‌ನಲ್ಲಿ ನಮ್ರತಾ ಅವರು, ಫಿಲಿಪೈನ್ಸ್‌ನ ಕ್ರಿಜಾನ್ ಫೇತ್ ಕೊಲ್ಲಾಡೊ ಅವರನ್ನು ೨-೦ ಅಂತರದಿಂದ ಸೋಲಿಸಿ, ಭಾರತಕ್ಕೆ ವುಶು ಕ್ರೀಡೆಯಲ್ಲಿ ಮೊದಲ ವಿಶ್ವ ಕ್ರೀಡಾಕೂಟದ ಪದಕವನ್ನು ಖಚಿತಪಡಿಸಿದರು.

******END****